**CCE RR**

ಸಂಕೇತ ಸಂಖ್ಯೆ : **33-K** ವಿಷಯ : ದ್ವಿತೀಯ ಭಾಷೆ — ಕನಡ

**Code No. : 33-K** **Subject : Second Language — KANNADA**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ ಮತ್ತು ಪದ್ಯಗಳ 53 ಅಂಕಗಳ ಒಟ್ಟಾರೆ 26 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ವ್ಯಾಕರಣಗಳ 12 ಅಂಕಗಳ ಒಟ್ಟಾರೆ 12 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 15 ಅಂಕಗಳ ಒಟ್ಟಾರೆ 7 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : $8 \times 1 = 8$

1. ಬಾಣಕ್ಕೆ ಗುರಿಯಾಗುವಷ್ಟು ದೂರ ಎಂದರೇನು ?

2. ಕ್ರಿಕೆಟ್ ಆಟದ ಬಗ್ಗೆ ಇರುವ ಅಪವಾದವೇನು ?

3. ಪುಟ್ಟರಾಜರ ಸೋದರಮಾವನು ಪುಟ್ಟರಾಜರನ್ನು ಪಂಚಾಕ್ಷರಿ ಗವಾಯಿಗಳಿಗೆ ಏಕೆ ಒಪ್ಪಸಿದರು ?

4. ಅಂತರಾತ್ಮ ಏನೆಂದು ಚೀರುತ್ತದೆ ?

5. ಅಜ್ಜ ಅಕ್ಕಿಯನ್ನು ತೆಗೆದುಕೊಂಡು ಹೋದದ್ದು ಹೇಗೆ ?

6. ಅಂಧತ್ವವು ಪುಟ್ಟರಾಜರ ಪಾಲಿಗೆ ಏಕೆ ದುರಂತವಾಗಲಿಲ್ಲ ?

7. ಮಗುವಿನ ಮುಗ್ಧನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು ?

8. ಹಗಲಿರುಳು ಯಾವುದಕ್ಕೆ ಹೋರಾಡಬೇಕು ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $11 \times 2 = 22$

9. ಗಿಳಿಯು ಕೇಳಿದ ವರವು ಯಾವುದು ?

10. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?

11. ಪುಟ್ಟರಾಜರಿಗೆ ದೊರೆತ ಪ್ರಶಸ್ತಿಗಳಾವುವು ?

12. ಪಶ್ಚಿಮ ಘಟ್ಟಗಳು ಯಾವುದರ ಗುಡಾಣವಾಗಿವೆ ?

13. ಮಹಾಮನೆಯ ಸಣ್ಣತನ ಗೊತ್ತಾಗಿ ಹೋಗುತ್ತದೆ ಎಂದರೇನು ?

14. ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದರ ಪರಿಣಾಮವೇನು ?

15. ಬಾಹುಬಲಿಯನ್ನು ಕಂಡು ಮಗುವಿಗೆ ಆಶ್ಚರ್ಯವಾದುದೇಕೆ ?

16. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?

17. ಕಂದಯ್ಯ ಅತ್ತರೆ ಆಗುವ ಅಚ್ಚರಿಗಳೇನು ?

18. ಕುರ್ಚಿಯ ಬಗ್ಗೆ ಜೋಯಿಸರ ಹೆಂಡತಿಗೆ ಇರುವ ಭಾವನಾತ್ಮಕ ಸಂಬಂಧ ಎಂತಹುದು ?

19. ಅಯ್ಯೋ ಕ್ಷಮಿಸಿ ಎಂದು ಸಾವಿತ್ರಿಯು ಹೇಳಿದ್ದು ಏಕೆ ?

20. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 3 = 3$

ವೇಷಧರಿಸಿ ______________________________

______________________________

______________________________

______________________________ತಾನಾಗದನ್ನಕ್ಕ.

***ಅಥವಾ***

ಮರವಿದ್ದು ಫಲವೇನು ______________________________

______________________________

______________________________

______________________________ಗುಣವಿಲ್ಲದನ್ನಕ್ಕ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ : $2 \times 3 = 6$

21. "ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು ಇದು."

22. "ಒಂದು ಜೀವನಕೇಕೆ ಹಲವು ಸಾಧ್ಯಗಳು."

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$

23. ಬಿ.ಪಿ. ರಾಧಾಕೃಷ್ಣ

24. ಬಸವರಾಜ ಸಾದರ

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು–ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

25. "ನನ್ನ ಗೋಪಾಲ" ಪಾಠದಲ್ಲಿ ಬಂದಿರುವ ಪ್ರಕೃತಿಯ ವರ್ಣನೆಯನ್ನು ಕುರಿತು ಬರೆಯಿರಿ.

***ಅಥವಾ***

ತಾಯಿಗೆ ಗೋಪಾಲನ ಮೇಲಿರುವ ಪ್ರೀತಿಯನ್ನು ಕುರಿತು ಬರೆಯಿರಿ.

26. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

***ಅಥವಾ***

ಅರ್ಜುನ ಮತ್ತು ಉತ್ತರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸವನ್ನು ಬರೆಯಿರಿ.

## ವಿಭಾಗ – 'ಬಿ'

## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ : $12 \times 1 = 12$

27. 'ಮರದಲ್ಲಿ' ಪದದಲ್ಲಿರುವ ವಿಭಕ್ತಿ
    - (ಎ) ದ್ವಿತೀಯಾ
    - (ಬಿ) ತೃತೀಯಾ
    - (ಸಿ) ಚತುರ್ಥೀ
    - (ಡಿ) ಸಪ್ತಮೀ

28. 'ನಯನ' ಈ ಪದಕ್ಕೆ ಪ್ರಸ್ತಾರ ಹಾಕಿದಾಗ ಇರುವ ಲಘು–ಗುರುಗಳ ಸ್ವರೂಪ
    - (ಎ) $\cup\cup\cup$
    - (ಬಿ) $- - -$
    - (ಸಿ) $\cup - \cup$
    - (ಡಿ) $\cup\cup -$

29. 'ಅಂಬುಜ' ಪದದ ಅರ್ಥವಿದು
    - (ಎ) ನೀರು
    - (ಬಿ) ಕೆಸರು
    - (ಸಿ) ಕೆರೆ
    - (ಡಿ) ತಾವರೆ

30. ನುಡಿಗಟ್ಟಿಗೆ ಉದಾಹರಣೆ ಇದಾಗಿದೆ
    - (ಎ) ಸತತಪರಿಶ್ರಮ
    - (ಬಿ) ನೋಡಿದಾನೋಡಿದಾ
    - (ಸಿ) ಫಳಫಳನೆ
    - (ಡಿ) ಕಸಕಡ್ಡಿ

31. 'ಆದಿ' ಪದದ ವಿರುದ್ಧಾರ್ಥಕ ಪದ

(ಎ) ಪ್ರಾರಂಭ (ಬಿ) ಮೊದಲು

(ಸಿ) ಅನಾದಿ (ಡಿ) ಅನಂತ್ಯ

32. ಆದೇಶ ಸಂಧಿಗೆ ಇದು ಉದಾಹರಣೆಯಾಗಿದೆ

(ಎ) ಮಳೆಗಾಲ (ಬಿ) ಧರೆಯನ್ನು

(ಸಿ) ಓಡೋಡಿ (ಡಿ) ಮಾತಿಲ್ಲ

33. 'ಅರಮನೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕರ್ಮಧಾರಯ (ಬಿ) ತತ್ಪುರುಷ

(ಸಿ) ಕ್ರಿಯಾ (ಡಿ) ದ್ವಿಗು

34. 'ಮನ್ಯಾಗಿದ್ದು' ಪದದ ಗ್ರಾಂಥಿಕ ರೂಪ

(ಎ) ಮನೆಗೆ ಇದ್ದು (ಬಿ) ಮನೆಯಲ್ಲಿ ಇದ್ದು

(ಸಿ) ಮನೆಯ ಮೇಲಿದ್ದು (ಡಿ) ಮನೆ ಇದ್ದು

35. "ತಟ್ಟೆಯೊಳಗೆ ಕರ್ಪೂರ ಮೌನದಲಿ ಕರಗುವೊಲು"

ಈ ವಾಕ್ಯದಲ್ಲಿರುವ ಅಲಂಕಾರ

(ಎ) ರೂಪಕ (ಬಿ) ದೀಪಕ

(ಸಿ) ಅನುಪ್ರಾಸ (ಡಿ) ಉಪಮೆ

36. 'ಸರ್ವನಾಮ' ಪದಕ್ಕೆ ಇದು ಉದಾಹರಣೆ

(ಎ) ಹರೀಶ (ಬಿ) ಹುಲಿ

(ಸಿ) ನಾವು (ಡಿ) ಹೂವು

37. 'ಸಿಡುಕು–ಮಿಡುಕು' ಎಂಬ ಪದವು ಇದಕ್ಕೆ ಉದಾಹರಣೆಯಾಗಿದೆ

(ಎ) ಅನುಕರಣಾವ್ಯಯ (ಬಿ) ಜೋಡಿಪದ

(ಸಿ) ದ್ವಿರುಕ್ತಿ (ಡಿ) ಗಾದೆ

38. 'ಆಕಾಶ' ಪದದ ತದ್ಭವ ರೂಪ

(ಎ) ಆಖಾಸ (ಬಿ) ಅವಕಾಶ

(ಸಿ) ಆಗಸ (ಡಿ) ಮುಗಿಲು

## ವಿಭಾಗ – ಸಿ
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

$4 \times 1 = 4$

ಭಾರತ ದೇಶ ಒಂದು ಜಾತ್ಯತೀತ ರಾಷ್ಟ್ರ ಇಲ್ಲಿ ಅನೇಕ ಭಾಷೆ, ಧರ್ಮ, ಸಂಸ್ಕೃತಿ, ಆಹಾರ, ವೇಷಭೂಷಣಗಳಿಂದ ಕೂಡಿರುವ ಜನರಿದ್ದಾರೆ. ಆದರೂ ಇವರೆಲ್ಲ ಇವುಗಳನ್ನೆಲ್ಲಾ ತೋರಿಸದೆ ವೈವಿಧ್ಯತೆಯಲ್ಲಿ ಏಕತೆಯಿಂದ ಬಾಳುತ್ತಿದ್ದಾರೆ.

ಈ ರೀತಿಯ ಜೀವನ ಸಾಗಿಸುವುದರಿಂದ ದೇಶದ ಅಭಿವೃದ್ಧಿ ಸಾಧ್ಯ. ಜನರಲ್ಲಿ ಮೇಲು–ಕೀಳು, ಬಡವ–ಬಲ್ಲಿದ ಎಂಬ ಭಾವನೆ ಬೆಳೆದಾಗ ಅಶಾಂತಿಯುಂಟಾಗಿ ದೇಶದ ಪ್ರಗತಿಗೆ ತೊಡಕಾಗುತ್ತದೆ. ಈ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. 'ಕೂಡಿ ಬಾಳುವುದೇ ಸ್ವರ್ಗ ಸುಖ, ಎಲ್ಲಿಯೊ ಸ್ವರ್ಗ ನರಕಗಳಿಲ್ಲ.' ಇದನ್ನೆ ಬಸವಣ್ಣನವರು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದಿದ್ದಾರೆ.

*ಪ್ರಶ್ನೆಗಳು :*

39. ಭಾರತೀಯರು ಹೇಗೆ ಬಾಳುತ್ತಿದ್ದಾರೆ ?

40. ಭಾರತ ಎಂತಹ ರಾಷ್ಟ್ರವಾಗಿದೆ ?

41. ದೇಶದ ಪ್ರಗತಿಗೆ ಅಡಚಣೆ ಉಂಟು ಮಾಡುವ ಅಂಶಗಳಾವುವು ?

42. ಬಸವಣ್ಣನವರ ಅಭಿಪ್ರಾಯದಲ್ಲಿ ಸ್ವರ್ಗ–ನರಕಗಳಾವುವು ?

43. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ***ಒಂದನ್ನು*** ಆರಿಸಿಕೊಂಡು ಉದಾಹರಣೆಯೊಂದಿಗೆ ವಿಸ್ತರಿಸಿ ಬರೆಯಿರಿ : $1 \times 3 = 3$

* ಕೈಕೆಸರಾದರೆ ಬಾಯಿ ಮೊಸರು.
* ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು.
* ಬೆಳ್ಳಗಿರುವುದೆಲ್ಲ ಹಾಲಲ್ಲ; ಹೊಳೆಯುವುದೆಲ್ಲ ಚಿನ್ನವಲ್ಲ.

44. ನಿಮ್ಮನ್ನು ಧಾರವಾಡದ ಹಳೆ ಬಡಾವಣೆಯ ನಿವಾಸಿ 'ಮಹೇಶ' ಎಂದು ಭಾವಿಸಿಕೊಂಡು, ಧಾರವಾಡದ ಮಹಾನಗರ ಪಾಲಿಕೆಯ ಆಯುಕ್ತರಿಗೆ ರಸ್ತೆ ದುರಸ್ಥಿ ಮಾಡಿಕೊಡುವಂತೆ ಕೋರಿ ಒಂದು ಮನವಿಪತ್ರ ಬರೆಯಿರಿ. 1 × 4 = 4

***ಅಥವಾ***

ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯ 'ಮಹೇಂದ್ರ ಕುಮಾರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಕೈಗೊಂಡಿರುವ ಸ್ವಚ್ಛತಾ ಆಂದೋಲನದ ಸ್ವವಿವರವನ್ನು ಸ್ನೇಹಿತನಾದ ಬೆಂಗಳೂರಿನ ನಿವಾಸಿ 'ಪ್ರಸಾದ್‌ಗೆ' ಪತ್ರ ಬರೆಯಿರಿ.

45. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ : 1 × 4 = 4

∗ ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ

∗ ರಾಷ್ಟ್ರೀಯ ಹಬ್ಬ – ಮಕ್ಕಳ ದಿನಾಚರಣೆ

∗ ಅಸ್ಪೃಶ್ಯತೆ ಒಂದು ಮಹಾಪಾಪ